## INTERNATIONAL INDIAN SCHOOL,DAMMAM

**B.M.S & G.M.S** **TERM -2 DECEMBER, 2017 - 2018** **MAX. MARKS: 80**

**CLASS –VIII** **THIRD LANGUAGE - KANNADA** **TIME: 3 HRS**

**GENERAL INSTRUCTIONS:**

**1. Read all questions carefully before answering.**

**2. All answers should be numbered as in the question paper.**

I. ಸರಿಯಾದ ಪದವನ್ನು ಆರಿಸಿ ಬಿಟ್ಟ ಸ್ಥಳ ತುಂಬಿಸಿ: [ 1 X 10 = 10 ]

೧. ಶಶಿಯಂಗಳದಿ ಭೂಮಿಯ ______________________ [ ಬೆರಳು , ನೆರಳು, ಹರಳು ]

೨. ತಿರುಳನು ಪಡೆಯುತ ಪಡೆಯಿರಿ __________________ [ ಮಾನ, ಜ್ಞಾನ, ಮಾನ ]

೩. ಈ ಒಲಂಪಿಕ್ ಕ್ರೀಡಾ ಸ್ಪರ್ಧೆಗಳಿಗೆ ಮೂರು ಸಾವಿರ ______________ ಇತಿಹಾಸವಿದೆ. [ ವಾರಗಳ, ವರ್ಷಗಳ, ತಿಂಗಳುಗಳ ]

೪. ೧೯೩೬ರಿಂದ ಒಲಂಪಿಕ್ ಜ್ಯೋತಿಯ ಬಳಕೆ _____________ ಬಂದಿತು. [ ರೂಢಿಗೆ, ಗೂಢಿಗೆ, ಕಾಡಿಗೆ ]

೫. ನಾನು ನಾಲ್ಕು ದಿನ ಕಳೆದ ಮೇಲೆ _________________ಗೆ ಬರುತ್ತೇನೆ. [ ಅರಮನೆ, ಮನೆ, ಕೋಣೆಗೆ ]

೬. ಇವುಗಳ _________ದಲ್ಲಿ ಅಂತಹ ವ್ಯತ್ಯಾಸವೇನಿದೆ? [ ಗುಣ, ಹಣ, ಪಣ ]

೭. ನನ್ನಷ್ಟು ಅನುಭವವು ___________________. [ ಇಲ್ಲ, ಇನ್ನಿಲ್ಲ, ಇನ್ನಾರಿಗಿಲ್ಲ ]

೮. ಮತದಾರರ ತಲೆ ___________ ಬಂದಿರುವೆನಲ್ಲ [ ಎಣಿಸಿ, ಉಣಿಸಿ, ತಣಿಸಿ]

೯. ಅವುಗಳಿಗೆ ತಕ್ಕ ರೀತಿಯಲ್ಲಿ ಉಪಚಾರ ಮಾಡಿಸಿ __________ ಉಳಿಸಿದನು. [ ಹಾವ, ಭಾವ, ಜೀವ ]

೧೦. ಅವರು ____________ ಕ್ಷಣ ಬೆಪ್ಪರಂತೆ ಮುಖ ಮುಖ ನೋಡಿಕೊಂಡರು.[ ಎರಡು, ಒಂದು, ಮೂರು]

2. ಇವುಗಳಲ್ಲಿ ಗುಂಪಿಗೆ ಸೇರದ ಪದ ಆರಿಸಿ ಬರೆಯಿರಿ: [ 1 X 3 = 3 ]

೧. ಸೇವಕ , ಕಿಂಕರ, ನಾಯಕ, ಆಳು

೨. ರವಿ, ಬಾನು ಸೂರ್ಯ, ಭಾನು,

೩. ಅರಿವು, ಜ್ಞಾನ, ತಿಳುವಳಿಕೆ, ಅವಿವೇಕ

3. ಸ್ವಂತ ವಾಕ್ಯದಲ್ಲಿ ಈ ಪದಗಳನ್ನು ಬಳಸಿ: [ 1 X 4 = 4 ]

೧. ಅರಮನೆ ೨. ಸಿದ್ಧತೆ ೩. ಪಂಜರ ೪. ನೀರಿನ ತೊಟ್ಟಿ

4. ಈ ಮಾತನ್ನು ಯಾರು ಯಾರಿಗೆ ಹೇಳಿದರು? [ 1 X 2 = 2 ]

೧."ಹಾಗಾದರೆ ಈ ಮಾತನ್ನು ಸಾಬೀತು ಪಡಿಸಿ ತೋರಿಸಬಲ್ಲೆಯಾ?"

೨. "ನಾನು ಈ ಗಿಣಿಗಳ ಗುಣಕ್ಕೆ ತಕ್ಕಂತೆ ಬೆಲೆ ನಿಗದಿ ಮಾಡಿದ್ದೇನೆ."

**5.ಇವುಗಳನ್ನು ಹೊಂದಿಸಿ ಬರೆಯಿರಿ: [ ½ X 10 = 5 ]**

| | |
|---|---|
| ೧. ನೀರೋಳು | ಅ) ಆಳುಗಳು |
| ೨. ತೋಟದ | ಆ) ಜ್ಯೋತಿ |
| ೩. ಪರೀಕ್ಷೆ | ಇ) ಮಾಡಿರುವೆ ಎಲ್ಲ |
| ೪. ಒಲಂಪಿಯಾ | ಈ) ಬೆಲೆಹೇಳು |
| ೫. ಒಲಂಪಿಕ್ | ಉ) ಗುಟ್ಟನು |
| ೬. ಗ್ರಹಣದ | ಊ) ಮುಳುಗಿ |
| ೭. ಸಜ್ಜನರ | ಋ) ನಿಮ್ಮ ಸಹಕಾರ |
| ೮. ಗಿಣಿಗಳ | ೠ) ನಗರ |
| ೯. ಆದರೂ ಬೇಡುವೆನು | ಎ) ಪ್ರಯೋಗ |
| ೧೦. ದನಗಣತಿ ಮನೆಗಣತಿ | ಏ) ಸಹವಾಸ |

**6.ಈ ಕೆಳಗಿನ ಹತ್ತು ಪದಗಳ ಅರ್ಥ ಬರೆಯಿರಿ: [ ½ X 10 = 5 ]**

೧. ಅವಶೇಷ ೨. ಇಮ್ಮಡಿ ೩. ಬಾಧಕ ೪. ಜನಗಣತಿ ೫. ಶಶಿ ೬. ಇರುಳು

೭.ಅಂತರ ೮. ಪತನ ೯. ಮುಕ್ತಗೊಳಿಸಿದ ೧೦ ದಿಢೀರನೆ ೧೧. ಕ್ರೀಡೆ ೧೨. ಸಜ್ಜನರ ಸಹವಾಸ

**7. ಈ ಕೆಳಗಿನ ಐದು ಪದಗಳ ಸಮಾನಾರ್ಥಕ ಪದಗಳನ್ನು ಬರೆಯಿರಿ: [ 1 X 5 = 5 ]**

೧. ಸಮೀಪ ೨. ಕುದುರೆ ೩. ಆದೇಶ

೪. ಕೆಲಸ ೫. ಸಂಚಾರ ೬. ದಯಾಮಾಡಿಸಿದ

8. ಬಿಟ್ಟ ಪದ ತುಂಬಿಸಿ: [ 1 x 4 = 4 ]

೧. ಬೇಟೆಗಾರನು ನಿಜಕ್ಕೂ ಬಹಳ ____________________.

೨. ನಿನ್ನ ಲೋಕ ಜ್ಞಾನವನ್ನು ನಾನು ______________.

೩. ಅದು ಮರಿಯ ____________ದ ಚಿಂತೆಯನ್ನು ಮರೆಯಿತು.

೪. ಪ್ರತಿ ಹತ್ತು ವರ್ಷಕ್ಕೊಮ್ಮೆ __________________ದಲ್ಲಿ ಜನಗಣತಿ ಕಾರ್ಯವು ನಡೆಯುತ್ತದೆ.

**9. ಈ ಕೆಳಗಿನ ವಾಕ್ಯಗಳನ್ನು ಸರಿ /ತಪ್ಪು ಎಂದು ಗುರುತಿಸಿ ಬರೆಯಿರಿ: [ 1 X 4 = 4 ]**

೧. ಒಂದು ಪ್ರಶ್ನೆಯ ಕೇಳುವೆನು ನಿಮಗೆ .

೨. ಗ್ರಹಣದ ಗುಟ್ಟನು ಅರಿಯುವಿರೇಕೆ ?

೩. ತಿರುಳನು ತಿಳಿಯುತ ಪಡೆಯಿರಿ ಜ್ಞಾನ.

೪. ಇಪ್ಪತ್ತು ವರ್ಷಕ್ಕೊಮ್ಮೆ ನನ್ನ ಅವತಾರ

**10. ಈ ಸಾಲುಗಳನ್ನು ಸರಿಪಡಿಸಿ ಬರೆಯಿರಿ: [ 1 X 2 = 2 ]**

೧. ಬರದು ಬಾಧಕವು ಬಿಕ್ಕಟ್ಟು ಏನಿಲ್ಲ.

೨. ಹೇಳಿ ಬಾಯ್ಬಿಟ್ಟು ಇದ್ದುದ್ದೇನೇ ಇರಲಿ

**11.ಈ ಪದಗಳ ವಚನ ಬದಲಾಯಿಸಿ: [ ½ X 6 = 3 ]**

೧. ಬಾಲಕ ೨. ಮನುಷ್ಯರು ೩.ಬೇಟೆಗಾರರು

೪. ಪ್ರಾಣಿ ೫. ಮಕ್ಕಳು ೬. ಕಾರಣಗಳು

**12.** ಈ ಕೆಳಗಿನ ಪ್ರಶ್ನೆಗಳಿಗೆ ಒಂದು ಪದದಲ್ಲಿ ಉತ್ತರಿಸಿರಿ: [ 1 **X** 2 = 2 ]

೧. ಎಡಗೈಯಲ್ಲಿದ್ದ ಗಿಣಿಯ ಬೆಲೆ ಎಷ್ಟು ರೂಪಾಯಿ?

೨. ಮಾನವನಿಗೆ ಹೆಚ್ಚು ಪ್ರಿಯವಾದುದು ಯಾವುದು?

**13.** ಈ ಕೆಳಗಿನ ಪದ್ಯಭಾಗವನ್ನು ಪೂರ್ತಿಗೊಳಿಸಿರಿ: **[ 5 MARKS ]**

ಹಲವಾರು ________________ __________ನಿಮಗೆ

_________ ________ ___________ ನನಗೆ

______________ __________ _________ ಅರೆಗಳಿಗೆ

______________ ___________ _________ ಮನೆಗೆ

ಅಥವಾ **[ OR ]**

ಗ್ರಹಣದ ____________

_________________

__________ ________

_______________ ನಾನು

ಅವರನು ______________

____________ _________

________________

______________ಗುಣಗಿ

**14.** ಈ ಕೆಳಗಿನ ಹತ್ತು ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ: **[ 1 X 10 = 10 ]**

೧. ಮಕ್ಕಳು ಏನನ್ನು ಅರಿಯಬೇಕು?

೨.ಚಂದ್ರಗ್ರಹಣ ಹೇಗೆ ಉಂಟಾಗುತ್ತದೆ?

೩. ಕೋತಿಯು ಯಾವಾಗ ಆತಂಕಗೊಂಡಿತು?

೪. ಅಕ್ಬರ್ ಚಕ್ರವರ್ತಿಯು ಯಾವ ಪ್ರಶ್ನೆಯನ್ನು ಕೇಳಿದನು?

೫. ಪ್ರಾಚೀನ ಒಲಂಪಿಯಾ ನಗರ ಯಾವುದಕ್ಕೆ ಪ್ರಸಿದ್ಧಿ ಪಡೆದಿದೆ?

೬. ಒಲಂಪಿಕ್ ಕ್ರೀಡೆಗಳು ಎಷ್ಟು ವರ್ಷಗಳಿಗೊಮ್ಮೆ ನಡೆಯುತ್ತವೆ?

೭. ವೈಯಕ್ತಿಕ ಕ್ರೀಡಾ ಸ್ಪರ್ಧೆಯಲ್ಲಿ ಎಷ್ಟು ಜನ ಭಾಗವಹಿಸಬಹುದು?

೮.ರಾಜನಿಗೆ ಯಾರ ಮೇಲೆ ಪ್ರೀತಿ ಉಂಟಾಯಿತು?

೯. ರಾಜನಿಗೆ ಯಾರು ಶಾಪ ಹಾಕಿದರು?

೧೦. ಜನಗಣತಿದಾರ ಎಷ್ಟು ದಿನಗಳ ಕಾಲ ಸಂಚಾರ ಮಾಡುತ್ತಾನೆ?

೧೧. ಜನಗಣತಿದಾರ ಯಾರ ತಲೆ ಎಣಿಸುತ್ತಾನೆ?

೧೨.ಒಲಂಪಿಕ್ ಕ್ರೀಡೆಗಳು ಎಷ್ಟು ದಿನಗಳ ಕಾಲ ನಡೆಯುತ್ತವೆ?

**15.**ಈ ಕೆಳಗಿನ ಐದು ಪ್ರಶ್ನೆಗಳನ್ನು ಉತ್ತರಿಸಿರಿ: **[ 2 X 5 = 10 ]**

೧. ೧೯೮೪ ರಲ್ಲಿ ನಡೆದ ಕ್ರೀಡಾಕೂಟ ಹೇಗಿತ್ತು?

೨. ಒಲಂಪಿಕ್ ಜ್ಯೋತಿ ಎಂದರೇನು? ಅದನ್ನು ಬೆಳಗುವುದನ್ನು ಯಾವಾಗಿನಿಂದ ಮತ್ತು ಎಲ್ಲಿಂದ ಪ್ರಾರಂಬಿಸಲಾಯಿತು?

೩. ಅಕ್ಬರನ ಪ್ರಶ್ನೆಗೆ ಬೀರಬಲ್ಲನು ಏನೆಂದು ಉತ್ತರಿಸಿದನು?

೪. ರಾಜನು ಬೇಟೆಗಾರನಿಂದ ಗಿಣಿಗಳನ್ನು ತೆಗೆದುಕೊಂಡ ನಂತರ ಬೇಟಗಾರನಿಗೆ ಏನು ಹೇಳಿದನು?

೫. ಒಂದು ಗಿಣಿಯಲ್ಲಿ ಒಳ್ಳೆಯ ಗುಣ ಇನ್ನೊಂದು ಗಿಣಿಯಲ್ಲಿ ಕೆಟ್ಟ ಗುಣಗಳು ಬರಲು ಕಾರಣವೇನು?

೬. ಬೀರಬಲ್ಲನು ಪರೀಕ್ಷೆ – ಪ್ರಯೋಗಗಳು ಮುಗಿದ ಮೇಲೆ ಏನು ಮಾಡಿದನು?

೭. ಒಲಂಪಿಕ್ ಕ್ರೀಡಾಸ್ಪರ್ಧೆಗಳನ್ನು ಎಲ್ಲಿ ಏರ್ಪಡಿಸುತ್ತಾರೆ?

**16.** ಈ ಗದ್ಯಭಾಗವನ್ನು ಓದಿ ಕೆಳಗಿನ ಪ್ರಶ್ನೆಗಳನ್ನು ಉತ್ತರಿಸಿರಿ: **[ 6 MARKS ]**

ನಮ್ಮ ನಾಡಿನಲ್ಲಿ ನಾಟಕ ಕಲೆಯ ಉನ್ನತಿಗಾಗಿ ಸಾಕಷ್ಟು ಮಂದಿ ದುಡಿದಿದ್ದಾರೆ. ಅವರಲ್ಲಿ ಕಲ್ಚರ್ಡ್ ಕಮೆಡಿಯನ್ ಶ್ರೀ ಕೆ. ಹಿರಣಯ್ಯನವರು. ಕನ್ನಡ ವೃತ್ತಿ ನಾಟಕ ರಂಗದಲ್ಲಿ ಸಾಕಷ್ಟು ಹೆಸರು ಮಾಡಿದ ಪ್ರಮುಖರಲ್ಲಿ ಶ್ರೀ. ಕೆ. ಹಿರಣಯ್ಯನವರು ಒಬ್ಬರು.

ಶ್ರೀ ಕೆ. ಹಿರಣಯ್ಯನವರು ೧೯೦೫ರಲ್ಲಿ ಬೆಂಗಳೂರಿನಲ್ಲಿ ಜನಿಸಿದರು. ಅವರ ತಂದೆಯ ಹೆಸರು ಶ್ರೀ ಅನಂತರಾಮಯ್ಯನವರು. ತಾಯಿಯ ಹೆಸರು ಲಕ್ಷ್ಮೀದೇವಮ್ಮನವರು, ಶ್ರೀ ಹಿರಣಯ್ಯನವರು ಏಳನೇ ತರಗತಿಯಲ್ಲಿರುವಾಗಲೇ ಶಾಲೆಗೆ ಶರಣು ಹೊಡೆದರು. ತಮಗೆ ಬಹಳ ಪ್ರಿಯವಾಗಿದ್ದ ನಾಟಕರಂಗಕ್ಕೆ ಪಾದಾರ್ಪಣೆ ಮಾಡಿದರು. ಕಡೆಯ ತನಕವೂ ಅವರು ಆ ರಂಗದಲ್ಲೇ ಉಳಿದರು.

ಶ್ರೀ ಹಿರಣಯ್ಯನವರು ವಿಶಿಷ್ಟ ಶೈಲಿಯ ಹಾಸ್ಯ ನಟರಾಗಿದ್ದರು. ಅವರು ಬರೆದ ನಾಟಕಗಳಲ್ಲಿ 'ದೇವದಾಸಿ' ಎಂಬ ನಾಟಕವೂ ಒಂದು. ಅದರಲ್ಲಿ ಅವರು ನಾಜೂಕಯ್ಯನ ಪಾತ್ರ ಮಾಡುತ್ತಿದ್ದರು. ತಮ್ಮ ಮಿತ್ರರ ಜೊತೆ ಸೇರಿ ' ಹಿರಣ್ಣಯ್ಯ ಮಿತ್ರಮಂಡಳಿ' ಎಂಬ ವೃತ್ತಿ ನಾಟಕ ಸಂಸ್ಥೆಯನ್ನು ಸ್ಥಾಪಿಸಿದ್ದರು. ಗೆಳೆಯರ ಸಹಕಾರದಿಂದ ೧೯೪೧ರಲ್ಲಿ 'ವಾಣಿ' ಎಂಬ ಒಂದು ಕನ್ನಡ ಚಲನಚಿತ್ರವನ್ನು ತಯಾರಿಸಿದ್ದರು. ಆ 'ವಾಣಿ' ಚಿತ್ರದಲ್ಲಿ ಅವರೂ ಅಭಿನಯಿಸಿದ್ದರು. ಅವರ ಅಭಿಮಾನಿಗಳು ಅವರಿಗೆ ಕಲ್ಚರ್ಡ್ ಕಮೆಡಿಯನ್ ಎಂಬ ಬಿರುದು ನೀಡಿ ಗೌರವಿಸಿದ್ದಾರೆ.

ಪ್ರಶ್ನೆಗಳು:

೧. ಶ್ರೀ ಕೆ. ಹಿರಣ್ಣಯ್ಯನವರ ತಂದೆ ತಾಯಿಯವರ ಹೆಸರೇನು?
೨. ಅವರು ಯಾವಾಗ ಮತ್ತು ಎಲ್ಲಿ ಜನಿಸಿದರು?
೩. ಅವರು ಬರೆದ ನಾಟಕ ಯಾವುದು?
೪. ಮಿತ್ರರ ಜೊತೆ ಸೇರಿ ಸ್ಥಾಪಿಸಿದ ನಾಟಕ ಸಂಸ್ಥೆ ಯಾವುದು?
೫. ಗೆಳೆಯರ ಸಹಕಾರದಿಂದ ಯಾವಾಗ ಮತ್ತು ಯಾವ ಚಲನಚಿತ್ರವನ್ನು ತಯಾರಿಸಿದ್ದರು?
೬. ಅಭಿಮಾನಿಗಳು ಅವರಿಗೆ ಯಾವ ಬಿರುದು ನೀಡಿ ಗೌರವಿಸಿದ್ದಾರೆ?

**XXXXXXXXXXXXXXXXXXXXXXX**